# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/ORG.1/Organiser Meeting/1110 /2026-27 ದಿನಾಂಕ:15.09.2026

## ಸಭಾ ಸೂಚನಾಪತ್ರ

ವಿಷಯ:- ದಿನಾಂಕ: 19 ಮತ್ತು 20 ಸೆಪ್ಟೆಂಬರ್ 2026ರಂದು ರಾಜ್ಯ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ ಸಂಘಟಕರ ಸಭೆಯನ್ನು ಆಯೋಜಿಸಿರುವ ಬಗ್ಗೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯಿಂದ ಮಾನ್ಯ ರಾಜ್ಯ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ: 19 ಮತ್ತು 20 ಸೆಪ್ಟೆಂಬರ್ 2026ರಂದು ರಾಜ್ಯ ಕೇಂದ್ರ ಕಛೇರಿ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು, ಜಿಲ್ಲಾ ಸಂಘಟಕರು, ಜಿಲ್ಲಾ ಸಂಘಟನಾ ಶಿಕ್ಷಕರು, ಸ್ಕೌಟ್-ಗೈಡ್ ಸ್ವಯಂ ಸೇವಕರು, ಸ್ಕೌಟ್-ಗೈಡ್ ಸಹಾಯಕರ ಸಭೆಯನ್ನು ಏರ್ಪಡಿಸಲಾಗಿದೆ. ಸದರಿ ಸಭೆಗೆ ಮೇಲ್ಕಂಡ ಎಲ್ಲಾ ಸಂಘಟಕರು ತಪ್ಪದೇ ಭಾಗವಹಿಸಲು ತಿಳಿಸಿದೆ.

**ಸಭೆಯಲ್ಲಿ ಚರ್ಚಿಸುವ ಅಂಶಗಳು:**

1. 2026-27ನೇ ಸಾಲಿನ ಗಣತಿ ಸಾಧನೆ ಬಗ್ಗೆ.
2. ಶಿಕ್ಷಕರುಗಳಿಗೆ/ಉಪನ್ಯಾಸಕರುಗಳಿಗೆ ವಿಶ್ವವಿದ್ಯಾನಿಲಯಗಳ/ಪದವಿ & ಪದವಿ ಪೂರ್ವ ಕಾಲೇಜುಗಳ ಬಿಗಿನರ್ಸ್ ಕೋರ್ಸ್, ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳ ಸಂಘಟನೆ ಬಗ್ಗೆ.
3. 2026-27ನೇ ಸಾಲಿನ ಕಾರ್ಯಕ್ರಮಗಳು, ಶಿಬಿರಗಳು, ತರಬೇತಿಗಳು, ಸ್ಪರ್ಧೆಗಳು, ರ್‍ಯಾಲಿ ಇತ್ಯಾದಿ ಚಟುವಟಿಕೆಗಳನ್ನು ಆಯೋಜಿಸಿರುವ ಬಗ್ಗೆ ಮತ್ತು ಮುಂದಿನ ಆಯೋಜನೆಗಳ ವಿವರಗಳ ಪಟ್ಟಿಯನ್ನು ತರುವುದು.
4. ರಾಜ್ಯ ಮಟ್ಟದ ಪ್ರಶಸ್ತಿಗೆ ಮೆಡಲ್ ಆಫ್ ಮೆರಿಟ್ಸ್, ಬಾರ್ ಟು ಮೆಡಲ್ ಆಫ್ ಮೆರಿಟ್ಸ್ ಮತ್ತು ಸೇವಾ ಪದಕ 5, 10,15,20,25 ವರ್ಷ ಮತ್ತು ಹೆಚ್ಚಿನ ವರ್ಷ ಸೇವೆ ಸಲ್ಲಿಸಿದ ಶಿಕ್ಷಕರುಗಳ ಅರ್ಜಿಗಳನ್ನು ಅಥವಾ ಪಟ್ಟಿಯನ್ನು ತರುವುದು
5. ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ರಾಷ್ಟ್ರಪತಿ ಪರೀಕ್ಷಾ ಶಿಬಿರವನ್ನು ಸಂಘಟಿಸುವ ಬಗ್ಗೆ.
6. ಗೋಲ್ಡನ್ ಆ್ಯರೋ ಅವಾರ್ಡ್ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಬಗ್ಗೆ.
7. 2026ರ ಧ್ವಜಚೀಟಿಯ ಹಂಚಿಕೆ ಮತ್ತು ಹಿಂದಿನ ಸಾಲಿನ ಬಾಕಿ ಮೊತ್ತವನ್ನು ತರುವ ಕುರಿತು.
8. ಇದುವರೆವಿಗೂ ನೀಡದೇ ಇರುವ 2025-26ನೇ ಸಾಲಿನ ವಾರ್ಷಿಕ ವರದಿಯನ್ನು ತರುವುದು.
9. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳ ಬಗ್ಗೆ ಚರ್ಚೆ

ಮೇಲೆ ತಿಳಿಸಿರುವ ಅಂಶಗಳ ಬಗ್ಗೆ ತಾವು ಸ್ಪಷ್ಟ ಮಾಹಿತಿಗಳ ಅಂಕಿ-ಅಂಶಗಳ ಸಿದ್ಧತೆ ಮಾಡಿಕೊಂಡು ಸಭೆಗೆ ಹಾಜರಾಗುವುದು. ಭಾಗವಹಿಸುವವರಿಗೆ ಬಂದು ಹೋಗುವ ಸಾಮಾನ್ಯ ಬಸ್ಸಿನ ಅಥವಾ ಎರಡನೇ ದರ್ಜೆಯ ರೈಲ್ವೆ ಟಿಕೇಟಿನ ಪ್ರಯಾಣ ದರವನ್ನು ಮಾತ್ರ ನೀಡಲಾಗುವುದು. ಊಟೋಪಚಾರದ ವ್ಯವಸ್ಥೆಯನ್ನು ರಾಜ್ಯ ಸಂಸ್ಥೆ ವ್ಯವಸ್ಥೆ ಮಾಡಲಾಗಿರುತ್ತದೆ. ತಾವು ದಿನಾಂಕ:19.09.2026ರಂದು ಬೆಳಗ್ಗೆ 9.00 ಗಂಟೆಗೆ ರಾಜ್ಯ ಕೇಂದ್ರ ಕಛೇರಿಯಲ್ಲಿ ರಾಜ್ಯ ಸಂಘಟನಾ ಆಯುಕ್ತರು(ಸ್ಕೌ/ಗೈ) ಇವರಲ್ಲಿ ವರದಿ ಮಾಡಿಕೊಳ್ಳುವುದು ಮತ್ತು ದಿನಾಂಕ:20.09.2026ರಂದು ಸಂಜೆ 6.00 ಗಂಟೆಯ ನಂತರ ಬಿಡುಗಡೆಗೊಳಿಸಲಾಗುವುದು

**ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ**

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ಗೆ,
ಸಹಾಯಕ ರಾಜ್ಯ ಸಂಘಟನಾ ಆಯುಕ್ತರು/
ಜಿಲ್ಲಾ ಸಂಘಟಕರು/ಜಿಲ್ಲಾ ಸಂಘಟನಾ ಶಿಕ್ಷಕರು
ಸ್ಕೌಟ್-ಗೈಡ್ ಸ್ವಯಂ ಸೇವಕರು/ಸ್ಕೌಟ್-ಗೈಡ್ ಸಹಾಯಕರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ______________________ ಜಿಲ್ಲೆ.

ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ: ಜಿಲ್ಲಾ ಕಾರ್ಯದರ್ಶಿ, ಭಾ.ಸ್ಕೌ&ಗೈ, ಕರ್ನಾಟಕ